ವಿಜಯ ಕರ್ನಾಟಕ
4 Nov 2013

# ಅನಗತ್ಯ ಸ್ಪರ್ಧೆಯಿಂದ ಬಡವಾಗುವ ಕಲಿಕೆ






ಕಳೆದ ವಾರ ತಮ್ಮ ದೇಶದ ಶಾಲಾ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದ ಬರಾಕ್ ಒಬಾಮಾ, ಅಮೆರಿಕದ ಮಕ್ಕಳು ಗಣಿತ ಮತ್ತು ವಿಜ್ಞಾನ ಶಿಕ್ಷಣದಲ್ಲಿ ಭಾರತೀಯರು ಹಾಗು ಚೀನೀಯರಿಗಿಂತ ಮುಂದಿರಬೇಕೆಂದು ಸಲಹೆ ನೀಡಿದ್ದಾರೆ. ಶೈಕ್ಷಣಿಕ ಸ್ಪರ್ಧೆಯಲ್ಲಿ ಹಿಂದೆ ಬಿದ್ದರೆ ಆರ್ಥಿಕವಾಗಿ ಅಮೆರಿಕ ಹಿಂದೆ ಬೀಳಬಹುದು ಎಂಬುದು ಅವರ ಉಪದೇಶದ ತಿರುಳು. ತಮ್ಮ ದೇಶದ ಯುವ ಪೀಳಿಗೆಯನ್ನು ವಿಶ್ವ ಆರ್ಥಿಕ ಸ್ಪರ್ಧೆಗೆ ತಯಾರು ಮಾಡಲು ಸಹಾಯವಾಗುವಂತೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿನ ಶುಲ್ಕ ಪ್ರಮಾಣವನ್ನು ಕಡಿಮೆ ಮಾಡುವ ಚಿಂತನೆ ನಡೆಸಿರುವುದಾಗಿಯೂ ಒಬಾಮಾ ತಿಳಿಸಿದ್ದಾರೆ.

ನಿಜ, ಅನಾರೋಗ್ಯಕರ ಸ್ಪರ್ಧೆ-ಪೈಪೋಟಿಯ ಮೂಲಕ ಸದಾಕಾಲ ಮಾರುಕಟ್ಟೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಸಾರ್ವಕಾಲಿಕವಾಗಿ ಲಾಭವನ್ನು ತಮ್ಮದಾಗಿಸಿಕೊಳ್ಳಬೇಕೆಂಬ ಮತ್ತು ಆ ಮೂಲಕ ಜಗತ್ತಿನ ಆರ್ಥಿಕ ವ್ಯವಸ್ಥೆಯನ್ನು ಬಂಡವಾಳ ಶಾಹಿ ರಾಷ್ಟ್ರಗಳ ಮಾರುಕಟ್ಟೆ ವಿಸ್ತರಣೆಗೆ ಮತ್ತು ಗರಿಷ್ಠ ಲಾಭಕ್ಕೆ ಕೊಂಡೊಯ್ಯುವ ಬಗ್ಗೆ ಸದಾಕಾಲ ಜಪಿಸುವ ಪ್ರತಿಯೊಬ್ಬರ ಆಲೋಚನೆಯೂ ಇದೇ ಆಗಿರುತ್ತದೆ.

ಮಾರುಕಟ್ಟೆ ವಿಸ್ತರಣೆ ಮತ್ತು ಗರಿಷ್ಟ ಲಾಭ ಇವು ಇಂದಿನ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಘನ ಉದ್ದೇಶಗಳು. ಶಿಕ್ಷಣ, ಸಂಸ್ಕೃತಿ, ಮಾನವೀಯತೆ, ಸಮಾನತೆ, ಸಾಮಾ ಜಿಕ ನ್ಯಾಯದ ಹಿರಿಮೆಗಿಂತ ಇಲ್ಲಿ ಲಾಭ-ನಷ್ಟಗಳ ಲೆಕ್ಕಾ ಚಾರ ಹಾಗೂ ಮಾರುಕಟ್ಟೆಯನ್ನು ಸದಾ ತನ್ನದಾಗಿಸಿಕೊಳ್ಳಲು ಅನುಸರಿಸಬೇಕಾದ

ಕಾರ್ಯತಂತ್ರವೇ ಹೆಚ್ಚುಗಾರಿಕೆ ಸಾಧಿಸುತ್ತದೆ. ಹೀಗಾಗಿ, ಒಬಾಮಾರವರ ಸಂದೇಶ ದಲ್ಲಿ ಹೊಸತೇನಿಲ್ಲ. ಜತೆಗೆ, ತನ್ನ ದೇಶದಲ್ಲಿ ಉನ್ನತ ಶಿಕ್ಷಣದ ವೆಚ್ಚವನ್ನು ತಗ್ಗಿಸಬೇಕೆನ್ನುವ ಒಬಾಮಾ, ಉಳಿದ ರಾಷ್ಟ್ರ ಗಳು ವಿದೇಶಿ ಖಾಸಗಿ ವಿಶ್ವವಿದ್ಯಾಲಯ ಗಳಿಗೆ ಅನುಮತಿ ನೀಡುವ ಮೂಲಕ ಉನ್ನತ ಶಿಕ್ಷಣವನ್ನು ವಿಶ್ವ ಮಾರುಕಟ್ಟೆ ಸಂಘಟನೆ ಯ ವ್ಯಾಪಾರ ಮತ್ತು ಸೇವೆಗಳ ಸಾಮಾನ್ಯ ಒಪ್ಪಂದದ ಅನ್ವಯ ಮಾರುಕಟ್ಟೆಗೆ ತೆರೆದು ಕೊಳ್ಳುವ ಹೊಸ ಬಗೆಯ ವ್ಯಾಪಾರೀ ಕರಣ ನೀತಿಗಳನ್ನು ಅಳವಡಿ ಸಿ ಕೊಳ್ಳಬೇಕೆಂದೂ ಹೇಳುತ್ತಾರೆ. ಬಂಡವಾಳಶಾಹಿ ವ್ಯವಸ್ಥೆಯ ಹುನ್ನಾರಗಳು ಏನೇ ಇರಲಿ, ಒಂದು ರಾಷ್ಟ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಶಿಕ್ಷಣ ವ್ಯವಸ್ಥೆ ಯಲ್ಲಿನ ಅಸಮಾನತೆ-ತಾರತಮ್ಯಗಳನ್ನು ತೊಡೆದು ಹಾಕದೆ, ಕೇವಲ ತೋರಿಕೆಯ ಸಮಾನತೆ ಮತ್ತು ಅನಾರೋಗ್ಯಕರ ಸ್ಪರ್ಧೆಯ ಸವಕಲು ಮಾತಿನಿಂದ ದೇಶವೊಂದು ಸುಸ್ಥಿರ ಆರ್ಥಿಕ- ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಬಲ್ಲದೇ ಎಂಬುದು ಹಲವು ದಶಕಗಳ ಚರ್ಚೆಯ ಕೇಂದ್ರಬಿಂದು.

ಇಂದು ವಿಶ್ವದಲ್ಲಿಯೇ ಅತ್ಯುತ್ತಮ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಕೊಂಡಿರುವ ಫಿನ್‌ಲೆಂಡ್‌ನಂತಹ ರಾಷ್ಟ್ರಗಳು ಅಲ್ಲಿಗೆ ಬಂದು ಮುಟ್ಟಲು ಅನುಸರಿಸಿದ ಕ್ರಮಗಳೇನು? ಸವೆಸಿದ ದಾರಿ ಯಾವುದು? ಎಂಬ ಹಲವು ಪ್ರಶ್ನೆಗಳು ಇಂಥಹ ಚರ್ಚೆಗಳಿಗೆ ಹೊಸ ಆಯಾಮ ನೀಡಬಲ್ಲವು. ಸಮಾನತೆ ಮತ್ತು ಸಮತೆಯನ್ನು ಒಡಲಾಳದಲ್ಲಿ ಇರಿಸಿಕೊಂಡು ಭದ್ರ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆ ಯನ್ನು ಕಟ್ಟಿಕೊಂಡ ಅವರ ಅನುಭವ ಮತ್ತು ಕಲಿಕೆ, ಅಸಮಾನತೆ ಯನ್ನು ಬಿತ್ತಿ ಬೆಳೆಸುವ ಮಾರುಕಟ್ಟೆ ಆಧಾರಿತ ಒಬಾಮಾ ಅವರ ಆಲೋಚನೆಗಿಂತಲೂ ಭಿನ್ನವಾಗಿರುತ್ತದೆ. ಉದಾಹರಣೆಗೆ, ಫಿನ್‌ಲೆಂಡ್ ದೇಶದ ಶಿಕ್ಷಣ ತಜ್ಞ ಮತ್ತು ಶಿಕ್ಷಣ ಸಚಿವಾಲಯದ ನಿರ್ದೇಶಕ ಪಾಸಿ ಶಾಲ್‌ಬರ್ಗ್, "ನಿಜವಾದ ವಿಜೇತರು ಎಂದಿಗೂ ಸ್ಪರ್ಧಿಸುವುದಿಲ್ಲ. ಬದಲಾಗಿ ಪರಸ್ಪರ ಸಹಾಯ ಮತ್ತು ಸಹಕಾರದಿಂದ ಗುಣಮಟ್ಟವನ್ನು ಸಾಧಿಸುತ್ತಾರೆ," ಎನ್ನುತ್ತಾರೆ. ಜತೆಗೆ, "ನನ್ನ ದೇಶದಲ್ಲಿ ಪ್ರತಿಷ್ಠಿತ ಶಾಲೆಗಳಾಗಲೀ, ಶಿಕ್ಷಕರಾಗಲೀ ಇಲ್ಲ. ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಪಾಲಕರು ತಮ್ಮ ಮಕ್ಕಳನ್ನು ಸೇರಿಸಲು ಉಳಿದೆಲ್ಲ ಮಾರುಕಟ್ಟೆ ವ್ಯವಸ್ಥೆಯಂತೆ ಶಿಕ್ಷಣದಲ್ಲಿ ಖಾಸಗಿ ಶಾಲೆಗಳನ್ನು (ಅಂಗಡಿಗಳನ್ನು) ಆಯ್ಕೆ ಮಾಡಿಕೊಳ್ಳುವ ಮೂಲಕ ತಮಗೆ ಇಷ್ಟವಾದ ಅಂಗಡಿಯಲ್ಲಿ ಶಿಕ್ಷಣವನ್ನು ಕೊಂಡುಕೊಳ್ಳಬಹುದು. ನಮ್ಮ ದೇಶದಲ್ಲಿಯೂ ಪೋಷಕರು ಶಾಲೆ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿದ್ದಾರೆ. ಆದರೆ, ಅವರಿಗೆ ಎಲ್ಲೆಡೆ ಒಂದೇ ರೀತಿಯ ಆಯ್ಕೆಗಳು ಮಾತ್ರ ದೊರೆಯುತ್ತವೆ. ಅಂತಿಮವಾಗಿ, ನಮ್ಮ ದೇಶದಲ್ಲಿ ಒಟ್ಟಾರೆ ಶಿಕ್ಷಣ ಕಾರ್ಯಕ್ರಮದ ಉದ್ದೇಶ-ಹೆಚ್ಚುಗಾರಿಕೆಗಿಂತ ಸಮಾನತೆಯೇ ದೊಡ್ಡದು ಎಂಬ ಆದರ್ಶ ತತ್ವದಿಂದ ಕೂಡಿದೆ," ಎನ್ನುತ್ತಾರೆ.

ಎಪ್ಪತ್ತರ ದಶಕದಲ್ಲಿ ಅಮೆರಿಕದ ಶಿಕ್ಷಣ ಪ್ರಶ್ನಾತೀತ ಹೆಗ್ಗಳಿಕೆ ಹೊಂದಿತ್ತು. ಶಿಕ್ಷಣ ಮತ್ತು ಆರ್ಥಿಕ ದಮನಕಾರಿ ನೀತಿ ಮೂಲಕ ಆರೋಗ್ಯಕರವಲ್ಲದ ಸ್ಪರ್ಧೆಯೊಡ್ಡಿ ಮಾರುಕಟ್ಟೆ ವಿಸ್ತರಣೆಯ ಮೊದಲ ಘಟ್ಟದಲ್ಲಿತ್ತು. ಇದೇ ಕಾಲಘಟ್ಟದಲ್ಲಿ ಫಿನ್‌ಲೆಂಡ್‌ನಂತಹ ರಾಷ್ಟ್ರಗಳು ಮೌನವಾಗಿ ಅರ್ಥಪೂರ್ಣ ಬೋಧನೆ ಹಾಗು ಕಲಿಕೆಯ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಕೊಳ್ಳುವ ಪ್ರಕ್ರಿಯೆ ಆರಂಭಿಸಿದವು. ಕಳಪೆ ಗುಣಮಟ್ಟದ ಅಸಮಾನ ಶಿಕ್ಷಣ ವ್ಯವಸ್ಥೆ ಹೊಂದಿದ್ದ ರಾಷ್ಟ್ರವೊಂದು, ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿಗಾಗಿ ಸಂಘಟನೆಯು (ಒಇಸಿಡಿ) ಹದಿನೈದು ವರ್ಷ ವಯಸ್ಸಿನ ಮಕ್ಕಳಿಗೆ ಭಾಷೆ,

ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ನಡೆಸುವ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಮೌಲ್ಯಾಂಕನ ಕಾರ್ಯಕ್ರಮದಲ್ಲಿ (ಪಿಸಾ) ಅಗ್ರಸ್ಥಾನ ಗಳಿಸಿರುವುದು ಒಂದು ಉತ್ತಮ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಕೊಳ್ಳಲು ಅನುಸರಿಸಬಹು ದಾದ ಅತ್ಯುತ್ತಮ ಮಾರ್ಗದ ಸೂಚ್ಯವಾಗುತ್ತದೆ. ನೀತಿ ನಿರೂಪಣಾ ತಜ್ಞರಾದ ಪಾಸಿಯವರು, "ಫಿನ್‌ಲೆಂಡ್ ತನ್ನ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಿಂದ ವ್ಯಾಪಕ ಸಮತೆ, ಉತ್ತಮ ಗುಣಮಟ್ಟ ಮತ್ತು ಹೆಚ್ಚಿನ ಪಾಲುಗಾರಿಕೆಯ ಮಾದರಿ ಆಧುನಿಕ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಸಾಧಾರಣ ಸಾರ್ವಜನಿಕ ವೆಚ್ಚದಲ್ಲಿ ಕಟ್ಟಿಕೊಂಡಿದೆ," ಎಂದು ವಿವರಿಸಿಸುತ್ತಾರೆ. ಅವರ ಮಾತಿನಂತೆ, ದೇಶದಲ್ಲಿ ಶೇ.೯೯ರಷ್ಟು ಮಕ್ಕಳು ಮೂಲ ಶಿಕ್ಷಣವನ್ನು ಮುಗಿಸುತ್ತಾರೆ. ಅವರಲ್ಲಿ 2/3 ಭಾಗದಷ್ಟು ಮಕ್ಕಳು ವಿಶ್ವವಿದ್ಯಾಲಯ ಮತ್ತು ಪಾಲಿಟೆಕ್ನಿಕ್ ಶಾಲೆಗಳಲ್ಲಿ ಶಿಕ್ಷಣ ಮುಂದುವರಿಸುತ್ತಾರೆ. ವಿವಿಧ ಹಂತಗಳಲ್ಲಿ ಶಿಕ್ಷಣದ ಶೇ.೯೮ರಷ್ಟು ವೆಚ್ಚವನ್ನು ಸರಕಾರವೇ ಭರಿಸುತ್ತದೆ.

ಆದರೆ, ನಮ್ಮಂತಹ ರಾಷ್ಟ್ರಗಳಲ್ಲಿ ಶಿಕ್ಷಣಕ್ಕೆ ಹಣ ಹೂಡುವುದನ್ನೇ ಒಂದು ಸಮಸ್ಯೆಯನ್ನಾಗಿಸಿಬಿಡುತ್ತೇವೆ. ಮೊನ್ನೆ ಮೊನ್ನೆ ನಮ್ಮ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ಅವರು ಶಾಲೆಗೆ ಅತಿ ಹೆಚ್ಚು ಹಣ ನೀಡುವವರನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸುವ ಬಗ್ಗೆ ಮಾತನಾಡಿದ್ದಾರೆ. ಮೂಲ ವಾರಸುದಾರರ ಸಹಭಾಗಿತ್ವದಲ್ಲಿ ಸಾರ್ವಜನಿಕ ಸಂಪನ್ಮೂಲಗಳ ಸಹಾಯದಿಂದ ಹೆಚ್ಚಿನ ಪಾಲುಗಾರಿಕೆಯ ಮೂಲಕ ಕಟ್ಟಿಕೊಳ್ಳಬೇಕಾದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಒಬ್ಬ ಸ್ಥಳೀಯ ಬಂಡವಾಶಾಹಿ ಶ್ರೀಮಂತನ ಮರ್ಜಿಗೆ ಒಳಪಡಿಸುವ ಆಲೋಚನಾ ಕ್ರಮ ಜನರನ್ನು ದಾಸ್ಯಕ್ಕೆ ದೂಡುವ ಕ್ರಮವಾಗುತ್ತದೆ. ಈ ಕ್ರಮ ಸಲ್ಲದು. ಎಸ್‌ಡಿಎಮ್‌ಸಿಗಳ ಕಳೆದ ಸುಮಾರು ಒಂದೂವರೆ ದಶಕದ ಸಹಭಾಗಿತ್ವದ ಹಿಂದೆ ಸಾಮಾಜಿಕ ನ್ಯಾಯದ ಅಪರಿಮಿತ ಪರಿಶ್ರಮ ಅಡಗಿದೆ. ಅದು ಹಣದ ಮೂಲಕ ನಿರ್ಧರಿಸುವುದಲ್ಲ.

ಇಂದು ಶಿಕ್ಷಣದಲ್ಲಿ ಸಮಗ್ರ ಸುಧಾರಣೆ ಬಯಸುವ ಹಲವು ರಾಷ್ಟ್ರಗಳು ಮಾರ್ಗದರ್ಶನ ಹಾಗೂ ಒಳಹುಗಳಿಗಾಗಿ ಫಿನ್‌ಲೆಂಡ್‌ನಂತಹ ದೇಶದತ್ತ ಮುಖ ಮಾಡಿವೆ. ಅಲ್ಲಿಗೆ ಭೇಟಿ ನೀಡಿದ ಹಲವರು ಹೇಳುವಂತೆ, ಫಿನ್‌ಲೆಂಡ್ ದೇಶದ ಶಾಲೆಗಳು ಅತ್ಯಂತ ಆಕರ್ಷಕ ಹಾಗೂ ಸದಭಿರುಚಿಯ ಶಾಲಾ ಮೂಲಭೂತ ಸೌಕರ್ಯಗಳನ್ನೊಳಗೊಂಡು ಸದಾ ಹಸನ್ಮುಖಿಗಳಾಗಿರುವ ಮಕ್ಕಳಿಂದ ಮತ್ತು ಅತಿ ಹೆಚ್ಚಿನ ಶಿಕ್ಷಣ ಪಡೆದ ಉನ್ನತ ಗುಣಮಟ್ಟದ ಶಿಕ್ಷಕರಿಂದ ತುಂಬಿವೆ. ಈ ಶಾಲೆಗಳು ಗರಿಷ್ಠ ಸ್ವಾಯತ್ತತೆ ಹೊಂದಿವೆ. ಅಲ್ಲಿನ ಎಲ್ಲ ಶಿಕ್ಷಕರು ಮೂರು ವರ್ಷಗಳ ಅತ್ಯಂತ ಉತ್ಕೃಷ್ಟ ಗುಣಮಟ್ಟದ ಪದವಿ ಶಿಕ್ಷಣವನ್ನು ಪೂರ್ಣವಾಗಿ ರಾಜ್ಯ ಸರಕಾರದ ವೆಚ್ಚದಲ್ಲಿ ಪಡೆಯುತ್ತಾರೆ. ಜತೆಗೆ, ಆಲೋಚನೆಗೆ ಒಳಪಡಿಸಲು ನೆರವಾಗುವ ಪಠ್ಯಕ್ರಮ ಮತ್ತು ಮೌಲ್ಯಾಂಕನ ಪದ್ಧತಿಗೆ ತೆರೆದುಕೊಳ್ಳುವ ಶಿಕ್ಷಣ ಪ್ರಕ್ರಿಯೆಗೆ ಒಳಗಾಗುತ್ತಾರೆ.

ಫಿನ್‌ಲೆಂಡ್ ದೇಶದ ಕಳೆದ ನಲವತ್ತು ವರ್ಷಗಳ ಶಿಕ್ಷಣ ಕ್ರಾಂತಿ ತನ್ನ ಅತ್ಯಂತ ಕೇಂದ್ರೀಕೃತ ಹಾಗೂ ಬಾಹ್ಯ ಮೌಲ್ಯಾಂಕನ ಆಧಾರಿತ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯನ್ನು ವಿಕೇಂದ್ರೀ ಕರಣದ ನೆಲೆಗಟ್ಟಿನಲ್ಲಿ, ಅಲ್ಲಿನ ಶಿಕ್ಷಕರು ಮತ್ತು ಮೂಲ ವಾರಸು ದಾರರ ಹೆಚ್ಚಿನ ಭಾಗವಹಿಸುವಿಕೆಯ ಮೂಲಕ, ರಾಷ್ಟ್ರೀಯ ಮಾನದಂಡಗಳಿಗನುಗುಣವಾಗಿ ರಚಿಸಲ್ಪಟ್ಟ ಪಠ್ಯಕ್ರಮ ಮತ್ತು ಕಲಿಕಾ ವ್ಯವಸ್ಥೆಗನುಗುಣವಾಗಿ ರೂಪಿಸಿಕೊಳ್ಳುವಲ್ಲಿ ಯಶಸ್ವಿ ಯಾಗಿದೆ. ಈ ಬಲಿಷ್ಠ ಶಿಕ್ಷಣ

ವ್ಯವಸ್ಥೆಯ ಆಧಾರವೆಂದರೆ, ಸ್ಥಳೀಯ ಶಾಲೆಗಳಿಗೆ ಮೂಲಭೂತ ಸೌಕರ್ಯ ಹಾಗೂ ಶಿಕ್ಷಕರ ಸಾಮರ್ಥ್ಯ ವೃದ್ಧಿಗೆ ಗರಿಷ್ಠ ಸಂಪನ್ಮೂಗಳ ಹೂಡಿಕೆ ಮೂಲಕ ವಿದ್ಯಾರ್ಥಿಗಳ ಎಲ್ಲ ಅವಶ್ಯಕತೆಗಳನ್ನು ಸಮಾನವಾಗಿ ಪೂರೈಸಿ, ಅರ್ಥಪೂರ್ಣ ಗುರಿ ಸಾಧನೆಗೆ ಮಾರ್ಗದರ್ಶನ ಒದಗಿಸುವ ಮೂಲಕ ಸ್ಥಳೀಯ ಪ್ರತಿಭೆ ಮತ್ತು ಸೃಜನಶೀಲತೆಯನ್ನು ಆಧರಿಸಿ ಸಮಾನ ಗುಣಮಟ್ಟದ ಪ್ರತಿಭೆಗಳು ಅರಳುವಂತೆ ಮಾಡುವುದು.

ಈ ಕ್ರಾಂತಿಕಾರಕ ಬದಲಾವಣೆಯ ಪರಿಣಾಮವಾಗಿ, ಫಿನ್‌ಲೆಂಡ್‌ನಲ್ಲಿ ಸಾಂಸ್ಕೃತಿಕ ವೈವಿಧ್ಯತೆ, ನಂಬಿಕೆ ಮತ್ತು ಗೌರವಗಳ ಮೂಲಕ ಎಲ್ಲರಿಗೂ ಸಮಾನ ಅವಕಾಶ, ಆರೋಗ್ಯಕರ ಸ್ಪರ್ಧೆ, ಸಂಪನ್ಮೂಲಗಳ ಸಮಾನ ಹಂಚಿಕೆ ಹಾಗೂ ಶಿಕ್ಷಣ ವೃತ್ತಿಪರರಲ್ಲಿ, ವಿಶೇಷವಾಗಿ ಶಿಕ್ಷಕರಲ್ಲಿ ಅಪಾರ ನಂಬಿಕೆ ಬಿತ್ತುವ ಮೂಲಕ ಉದ್ದೇಶ ಪೂರ್ವಕ ಕಟ್ಟಿಕೊಂಡ ಬಲಿಷ್ಠ ಶಿಕ್ಷಣ ವ್ಯವಸ್ಥೆ ರೂಪುಗೊಂಡಿದೆ. ಹಾಗಾಗಿ, ಸಮತೆಯನ್ನೂ ಸಾರುವ, ಪರಸ್ಪರ ಸಹಾಯ ಮತ್ತು ಸಹಕಾರದ ಆರೋಗ್ಯಕರ ಸಮಾಜ ಕಟ್ಟಿಕೊಳ್ಳುವ ಈ ವ್ಯವಸ್ಥೆಗೆ ನಾವು ಹೆಚ್ಚು ಹತ್ತಿರವಾಗಬೇಕಿದೆ